ಕರಾಸಕೈಅನಿನಿ

**ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ**

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ನೊಂದಾಯಿತ ಕಛೇರಿ: ಆಡಳಿತ ಕಛೇರಿ ಕಟ್ಟಡ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು-560010

ದೂರವಾಣಿ: 080-23407011-25 ಇ-ಮೈಲ್:kssidcho@gmail.com ವೆಬ್‌ಸೈಟ್:www.kssidc.co.in

ಸಂಖ್ಯೆ:ಕೈವ:ನಿರ್ವಹಣಾನೀತಿ:ಮಾರ್ಗಸೂಚಿ:2020/108 ದಿನಾಂಕ: 12-02-2020

## ಕಛೇರಿ ಆದೇಶ

**ವಿಷಯ:** ದಿನಾಂಕ 22.05.2015 ರಂದು ಜರುಗಿದ ನಿಗಮದ 334ನೇ ಮಂಡಳ ಸಭೆಯ ನಿರ್ಣಯದಂತೆ ದಿನಾಂಕ 22-06-2015 ರಂದು ಹೊರಡಿಸಿರುವ ಕಛೇರಿ ಆದೇಶದ ಪರಿಣಾಮ ಮತ್ತು ಅದನ್ನು ಪರಿಷ್ಕರಿಸುವ ಬಗ್ಗೆ.

ಉಲ್ಲೇಖ:
1. ದಿನಾಂಕ: 20-01-2020 ರಂದು ಜರುಗಿದ ಬಿಡಿ ಮಳಿಗೆ ಹಂಚಿಕೆ ಸಮಿತಿ ಸಭೆಯ ನಡವಳಿ.
2. ದಿನಾಂಕ 28-01-2020 ರಂದು ಜರುಗಿದ ನಿಗಮದ 357ನೇ ಆಡಳಿತ ಮಂಡಳಿ ಸಭೆಯ ನಡವಳಿಗಳು.
3. ನಿಗಮದ ಕಛೇರಿ ಆದೇಶ ಸಂಖ್ಯೆ:ಸಮನ್ವಯ:ಕೈವನಿ:ನೀತಿ:ಮಾ.ಸೂ:2015:972 ದಿನಾಂಕ: 22-06-2015.

*****

**ಪ್ರಸ್ತಾವನೆ:**

ದಿನಾಂಕ: 22-05-2015 ರಂದು ಜರುಗಿದ ನಿಗಮದ 334ನೇ ಆಡಳಿತ ಮಂಡಳಿ ಸಭೆಯು ನಿರ್ಣಯಿಸಿ ರೂಪಿಸಿರುವ ಕೈಗಾರಿಕಾ ವಸಾಹತು ನಿರ್ವಹಣಾ ಮಾರ್ಗಸೂಚಿಗಳನ್ನು ಅನುಸರಿಸುವಂತೆ ಸೂಚಿಸಿ ಹೊರಡಿಸಿರುವ ದಿನಾಂಕ: 22-06-2015ರ ಕಛೇರಿ ಆದೇಶವನ್ನು ಪರಿಷ್ಕರಿಸುವುದು ಸೂಕ್ತವೆಂದು ಅಭಿಪ್ರಾಯಿಸಿ, ಪ್ರಸ್ತಾವನೆಯನ್ನು ದಿನಾಂಕ: 20-01-2020 ರಂದು ನಿರ್ದೇಶಕರು, ಎಂ.ಎಸ್.ಎಂ.ಇ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ಇವರ ಅಧ್ಯಕ್ಷತೆಯಲ್ಲಿ ನಡೆದ ಸಮಿತಿ ಸಭೆಗೆ ಮಂಡಿಸಲಾಯಿತು.

ರಾಜ್ಯದಾದ್ಯಂತ ಇರುವ ಕೈಗಾರಿಕಾ ವಸಾಹತುಗಳಲ್ಲಿ ನಿಗಮವು ಅಭಿವೃದ್ಧಿಪಡಿಸಿರುವ ನಿವೇಶನಗಳನ್ನು ಪತ್ರಿಕಾ ಪ್ರಕಟಣೆ ನೀಡಿ ಹಂಚಿಕೆ ಪ್ರಕ್ರಿಯೆ ನಡೆಸಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಹಂಚಿಕೆ ಮಾಡಲಾಗುತ್ತಿದ್ದು, ಹಂಚಿಕೆ ಪತ್ರ ವಿತರಿಸಿದ 45/60/90 ದಿನಗಳೊಳಗಾಗಿ ನಿವೇಶನದ ಬಾಕಿ ಮೌಲ್ಯವನ್ನು ಇತರೆ ಶುಲ್ಕಗಳೊಂದಿಗೆ ಪಾವತಿಸಿ ಕರಾರು ಪತ್ರ ನಿರ್ವಹಿಸಿ ಸ್ವಾಧೀನ ನೀಡಲಾಗುತ್ತಿದೆ.

ಬೆಂಗಳೂರು ಗ್ರಾಮಾಂತರ ಮತ್ತು ನಗರ ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ಕೈಗಾರಿಕಾ ವಸಾಹತುಗಳಲ್ಲಿ ನಿಗಮದಿಂದ ಹಂಚಿಕೆಯಾದ ನಿವೇಶನವನ್ನು ಹಂಚಿಕೆದಾರರು ಸ್ವಾಧೀನ ಪಡೆದ 2 ವರ್ಷಗಳೊಳಗೆ ಹಾಗೂ ರಾಜ್ಯದ ಇತರೇ ಕೈಗಾರಿಕಾ ವಸಾಹತುಗಳಲ್ಲಿ ಹಂಚಿಕೆಯಾದ ನಿವೇಶನವನ್ನು ಸ್ವಾಧೀನ ಪಡೆದ 3/5 ವರ್ಷಗಳೊಳಗೆ, ಹಂಚಿಕೆಯಾದ ನಿವೇಶನದಲ್ಲಿ ಕೈಗಾರಿಕಾ ಕಟ್ಟಡವನ್ನು ನಿರ್ಮಿಸಿ, ಕೈಗಾರಿಕಾ ಚಟುವಟಿಕೆಯನ್ನು ಪ್ರಾರಂಭಿಸಬೇಕೆಂಬ ಷರತ್ತು ಮತ್ತು ನಿಬಂಧನೆಯನ್ನು ಹಂಚಿಕೆ ಪತ್ರ ಮತ್ತು ಕರಾರು ಪತ್ರದಲ್ಲಿ ವಿಧಿಸಿ ನೀಡಲಾಗುತ್ತಿದೆ.

ಕರಾಸಕೈಅನಿನಿ

ಆದಾಗ್ಯೂ, ಹಂಚಿಕೆದಾರರು ಹಲವಾರು ಕಾರಣಾಂತರಗಳಿಂದ ಅಂದರೆ, ಆರ್ಥಿಕ ಸಮಸ್ಯೆ, ಕಟ್ಟಡ ನಿರ್ಮಿಸುವಾಗಿನ ಸಮಸ್ಯೆಗಳು, ಹಂಚಿಕೆದಾರರ ಅನಾರೋಗ್ಯ, ಸಂವಿಧಾನದಲ್ಲಿನ ಬದಲಾವಣೆ, (Change of constitution of the firm) ನಿರ್ದೇಶಕರ/ ಪಾಲುದಾರರ ಮಧ್ಯೆ ಇರುವ ಭಿನ್ನಾಭಿಪ್ರಾಯಗಳು, ಇತ್ಯಾದಿಗಳಿಂದ ಹಂಚಿಕೆದಾರರು ಹಂಚಿಕೆಯಾಗಿರುವ ನಿವೇಶನದಲ್ಲಿ ಕೈಗಾರಿಕಾ ಕಟ್ಟಡವನ್ನು ನಿಗದಿತ ಅವಧಿಯಲ್ಲಿ ನಿರ್ಮಿಸದೆ ಇರುವ ಸಂದರ್ಭದಲ್ಲಿ, ನಿವೇಶನದ ಹಂಚಿಕೆಯನ್ನು ರದ್ದುಗೊಳಿಸಿ ಪಾವತಿಸಿರುವ ಎಲ್ಲಾ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುವ ನಿಯಮವಿರುತ್ತದೆ.

ಈ ರೀತಿ ಮಳಿಗೆ/ನಿವೇಶನಗಳ ಹಂಚಿಕೆಯನ್ನು ರದ್ದುಗೊಳಿಸಿ ನಂತರ ಮರು ಸ್ವಾಧೀನ ನೀಡುವ ವಿಚಾರವಾಗಿ ಕೈಗಾರಿಕಾ ವಸಾಹತು ನಿರ್ವಹಣಾ ನೀತಿಗೆ ಮಾರ್ಗಸೂಚಿಗಳನ್ನು ದಿನಾಂಕ: 22-05-2015 ರಂದು ಜರುಗಿದ ನಿಗಮದ 334ನೇ ಆಡಳಿತ ಮಂಡಳಿ ಸಭೆಯು ನಿರ್ಣಯಿಸಿದಂತೆ, ದಿನಾಂಕ: 22-06-2015 ರಂದು ಹೊರಡಿಸಿರುವ ಕಛೇರಿ ಆದೇಶದ ಪರಿಣಾಮವನ್ನು ಮನಗೊಂಡು, ಅದನ್ನು ಪರಿಷ್ಕರಿಸುವ ಬಗ್ಗೆ ಉಲ್ಲೇಖ 1 ಮತ್ತು 2 ರಲ್ಲಿನ ಸಭೆಗಳ ನಿರ್ಣಯದಂತೆ, ಹಂಚಿಕೆಯನ್ನು ರದ್ದುಗೊಳಿಸಿ ನಂತರ ಮರು-ಸ್ವಾಧೀನ ನೀಡುವ ಸಂದರ್ಭದಲ್ಲಿ ವಿಧಿಸುವ ದಂಡದ ಮೊತ್ತವನ್ನು ಪರಿಷ್ಕರಿಸಲಾಯಿತು.

"ಎಲ್ಲಿ ಮಳಿಗೆ/ನಿವೇಶನ/ಇತರೆ ಕಟ್ಟಡಗಳನ್ನು ನಿಯಮಾನುಸಾರ ರದ್ದುಗೊಳಿಸಿ ಬೀಗಮುದ್ರೆಗೊಳಿಸಿ ವಶಕ್ಕೆ ಪಡೆದು ಮರು-ಹಂಚಿಕೆಯಾಗದೆ ನಿಗಮದ ಸುಪರ್ದಿಯಲ್ಲಿದೆಯೋ", ಅವುಗಳಿಗೆ ಕೈಗಾರಿಕೆಗಳ ಅಭಿವೃದ್ಧಿ ಹಿತದೃಷ್ಟಿಯಿಂದ ಮತ್ತು ನಿಗಮವು ಕೈಗಾರಿಕಾ ಸ್ನೇಹಿ ಸಂಸ್ಥೆಯಾಗಿ ಕಾರ್ಯನಿರ್ವಹಿಸಲು ಅನುವಾಗುವಂತೆ ದಿನಾಂಕ: 22-06-2015ರ ಮಾರ್ಗಸೂಚಿ ಕಛೇರಿ ಆದೇಶದಲ್ಲಿನ ಹೆಚ್ಚುವರಿ ಮೌಲ್ಯ ಪ್ರಮಾಣವನ್ನು ಪರಿಷ್ಕರಿಸಿ ಕಡಿಮೆ ಮಾಡುವ ಹಾಗೂ ನಿಯಮಗಳನ್ನು ಪರಿಷ್ಕರಿಸುವ ಬಗ್ಗೆ ಬಿಡಿ ಮಳಿಗೆ ಹಂಚಿಕೆ ಸಮಿತಿ ಮತ್ತು ನಿಗಮದ 357ನೇ ಆಡಳಿತ ಮಂಡಳಿ ಸಭೆಯು ಪ್ರಸ್ತಾವನೆಯನ್ನು ಸುಧೀರ್ಘವಾಗಿ ಚರ್ಚಿಸಿರುತ್ತದೆ. ಅದರಂತೆ ಈ ಕೆಳಗಿನಂತೆ ಆದೇಶವನ್ನು ಹೊರಡಿಸಿದೆ.

**<u>ಆದೇಶ ಸಂಖ್ಯೆ:ಕೈವ/ನಿ.ನೀತಿ/ಮಾರ್ಗಸೂಚಿ/ಪರಿಷ್ಕರಣೆ/2020 ದಿನಾಂಕ: 12-02-2020</u>**

ಪ್ರಸ್ತಾವನೆಯಲ್ಲಿ ವಿವರಿಸಲಾಗಿರುವ ಅಂಶಗಳ ಹಿನ್ನಲೆಯಲ್ಲಿ ಹಾಗೂ ದಿನಾಂಕ: 20-01-2020 ರಂದು ಜರುಗಿದ ಬಿಡಿ ಮಳಿಗೆ ಹಂಚಿಕೆ ಸಮಿತಿ ಸಭೆ ಹಾಗೂ ದಿನಾಂಕ: 28-01-2020 ರಂದು ಜರುಗಿದ ನಿಗಮದ 357ನೇ ಆಡಳಿತ ಮಂಡಳಿ ಸಭೆಯ ನಿರ್ಣಯದಂತೆ ಉಲ್ಲೇಖ-3 ರಲ್ಲಿ ತಿಳಿಸಿರುವ ದಿನಾಂಕ: 22-06-2015ರ ಕಛೇರಿ ಆದೇಶವನ್ನು ಈ ಕೆಳಗಿನಂತೆ ಪರಿಷ್ಕರಿಸಲಾಗಿದೆ.

| ಕ್ರ.ಸಂ | ಪ್ರವರ್ಗ | ದಂಡದ ಪ್ರಮಾಣ |
|---|---|---|
| 1 | 'ಎ' | ಶೇ. 15 ರಷ್ಟು ಚಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ |
| 2 | 'ಬಿ' | ಶೇ. 10 ರಷ್ಟು ಚಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ |
| 3 | 'ಸಿ' | ಶೇ. 7.5 ರಷ್ಟು ಚಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ |
| 4 | 'ಡಿ' | ಶೇ. 5 ರಷ್ಟು ಚಾಲ್ತಿ ದರದ ಮೇಲೆ ದಂಡ + ಜಿ.ಎಸ್.ಟಿ |
| 5 | ಹಂಚಿಕೆದಾರರು ದಂಡವನ್ನು ಪಾವತಿಸದೇ, ನಿಗಧಿತ ಅವಧಿಯ ಸಮಯಾವಕಾಶದಲ್ಲಿ ಕಟ್ಟಡ ನಿರ್ಮಿಸಿ ಕೈಗಾರಿಕೆಯನ್ನು ಪ್ರಾರಂಭಿಸದೇ ಇದ್ದಲ್ಲಿ, ಹಂಚಿಕೆಯನ್ನು ರದ್ದುಪಡಿಸಿ ಹಂಚಿಕೆದಾರರು ಪಾವತಿಸಿದ ಎಲ್ಲಾ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು, ನಿವೇಶನವನ್ನು ನಿಗಮದ ವಶಕ್ಕೆ ವಾಪಸ್ಸು ಪಡೆಯುವುದು. | |

ಮೇಲೆ ತಿಳಿಸಿದಂತೆ, ಹಂಚಿಕೆದಾರರು ದಂಡವನ್ನು ಪಾವತಿಸಿದ ನಂತರ, ನಿವೇಶನದ ಹಂಚಿಕೆ ರದ್ದತಿಯನ್ನು ನಿರಸನಗೊಳಿಸಿ ಮರು-ಸ್ವಾಧೀನ ನೀಡಲು ವ್ಯವಸ್ಥಾಪಕ ನಿರ್ದೇಶಕರವರ ಅನುಮೋದನೆ ಪಡೆಯುವುದು. ಮತ್ತು ಅಂತಹ ಹಂಚಿಕೆದಾರರಿಗೆ ನಿವೇಶನ ಮರು-ಸ್ವಾಧೀನ ಪಡೆದ ಒಂದು ವರ್ಷ ಸಮಯಾವಕಾಶದಲ್ಲಿ ಕಡ್ಡಾಯವಾಗಿ ನಿವೇಶನದಲ್ಲಿ ಕಟ್ಟಡ ನಿರ್ಮಿಸಿ ಕೈಗಾರಿಕೆಯನ್ನು ಪ್ರಾರಂಭಿಸುವ ಷರತ್ತು ವಿಧಿಸುವುದು. ಈ ಸೌಲಭ್ಯವನ್ನು ಒಮ್ಮೆ ಮಾತ್ರ ಈ ಬಾರಿ ವಿಸ್ತರಿಸುವುದು ಹಾಗೂ ಯಾವುದೇ ಕಾರಣಕ್ಕೂ ವಿಸ್ತರಣೆ ಅವಕಾಶವಿರುವುದಿಲ್ಲ.

ಹಂಚಿಕೆದಾರರು ದಂಡವನ್ನು ಪಾವತಿಸಿ ನಿಗದಿಪಡಿಸಿರುವ ಒಂದು ವರ್ಷ ಕಾಲಾವಧಿಯಲ್ಲಿ ಮರುಸ್ವಾಧೀನ ಪಡೆದ ನಿವೇಶನದಲ್ಲಿ ಕಟ್ಟಡ ನಿರ್ಮಿಸಿ ಕೈಗಾರಿಕೆಯನ್ನು ಪ್ರಾರಂಭಿಸದೆ ಷರತ್ತನ್ನು ಉಲ್ಲಂಘಿಸಿದ ಸಂದರ್ಭದಲ್ಲಿ, ಅಂತಹ ಹಂಚಿಕೆದಾರರ ನಿವೇಶನ / ಮಳಿಗೆಯ ಹಂಚಿಕೆಯನ್ನು ರದ್ದುಗೊಳಿಸುವುದು. ಅಲ್ಲದೆ, ಅರ್ಹ ಅರ್ಜಿದಾರರಿಗೆ ಮರು-ಹಂಚಿಕೆ ಮಾಡಲು ಕೂಡಲೇ ನಿಗಮದ ನಿಯಮಾನುಸಾರ ಸೂಕ್ತ ಕ್ರಮವಹಿಸುವುದು.

ಅಲ್ಲದೆ, ನಿಗಮದ ಹಂಚಿಕೆ ನಿಯಮ ಮತ್ತು ಗುತ್ತಿಗೆ ಕರಾರು ಷರತ್ತುಗಳಂತೆ, ಗುತ್ತಿಗೆ ಕರಾರು ಅವಧಿ ಪೂರ್ಣಗೊಳಿಸಿರುವ ಈ ಪ್ರಕರಣಗಳಲ್ಲಿನ ಘಟಕಗಳಿಗೆ ಕ್ರಯಪತ್ರವನ್ನು ವಿತರಿಸುವ ಸಮಯದಲ್ಲಿನ ಚಾಲ್ತಿ / ಪ್ರಚಲಿತ ನಿವೇಶನದ ಮೌಲ್ಯದ ಮೇಲೆ ಶೇಕಡ 10 ರಷ್ಟು ದಂಡವನ್ನು ಪಾವತಿಸಿಕೊಂಡು ಕ್ರಯಪತ್ರ ನಿರ್ವಹಿಸುವುದು.

ಈ ಮೇಲಿನ ದಂಡ ಮತ್ತು ನಿರ್ಣಯವನ್ನು ಪರಿಷ್ಕೃತ ಪಟ್ಟಿಯಲ್ಲಿರುವಂತೆ ತಕ್ಷಣದಿಂದ ಹಾಗೂ ಸದರಿ ವಿಷಯದ ಬಗ್ಗೆ ಮುಂದೆ ಹೊರಡಿಸಲಾಗುವ ಆದೇಶದವರೆವಿಗೂ ಜಾರಿಯಲ್ಲಿರುತ್ತದೆ.

ನಿಗಮದ ಸಂಬಂಧಪಟ್ಟ ಎಲ್ಲಾ ಇಲಾಖಾ/ವಿಭಾಗ/ಶಾಖಾ ಮುಖ್ಯಸ್ಥರುಗಳು ಸದರಿ ಆದೇಶದಲ್ಲಿನ ಸೂಚನೆಗಳನ್ನು ಕಟ್ಟುನಿಟ್ಟಾಗಿ ಹಾಗೂ ಕಡ್ಡಾಯವಾಗಿ ಪಾಲಿಸತಕ್ಕದ್ದು.

(ಮಹೇಶ್ ಬಿ. ಶಿರೂರ್)
ವ್ಯವಸ್ಥಾಪಕ ನಿರ್ದೇಶಕರು

**ಇವರಿಗೆ,**

1. ಸಹಾಯಕ ಪ್ರಧಾನ ವ್ಯವಸ್ಥಾಪಕರು, ಕರಾಸಕೈಅನಿನಿ, ಬೆಂಗಳೂರು/ ತುಮಕೂರು / ಹುಬ್ಬಳ್ಳಿ / ಬೆಳಗಾವಿ/ ಕಲಬುರಗಿ/ ಮೈಸೂರು / ಶಿವಮೊಗ್ಗ.
2. ಶಾಖಾ ಮುಖ್ಯಸ್ಥರು, ಕರಾಸಕೈಅನಿನಿ, ಕೈಗಾರಿಕಾ ವಸಾಹತು, ಪೀಣ್ಯಾ/ ದಾವಣಗೆರೆ/ ಮಂಗಳೂರು / ಬಳ್ಳಾರಿ.

**ಪ್ರತಿ:**

1. ಪ್ರಧಾನ ವ್ಯವಸ್ಥಾಪಕರು(ಕೈವ, ಸಮನ್ವಯ & ವಾಣಿಜ್ಯ)/(ಆಡಳಿತ & ಭೂಸ್ವಾಧೀನ), ಕರಾಸಕೈಅನಿನಿ, ಬೆಂಗಳೂರು.
2. ಮುಖ್ಯ ಅಭಿಯಂತರರು-ಪ್ರಭಾರ, ಕರಾಸಕೈಅನಿನಿ, ಬೆಂಗಳೂರು.
3. ಉಪ ಪ್ರಧಾನ ವ್ಯವಸ್ಥಾಪಕರು (ಹಣಕಾಸು)/(ಆ.ಲೆ.ಪ)/(ವಾಣಿಜ್ಯ)/ವಲಯ-1/ವಲಯ-2, ಕರಾಸಕೈಅನಿನಿ, ಬೆಂಗಳೂರು/ಹುಬ್ಬಳ್ಳಿ.
4. ಸಹಾಯಕ ಪ್ರಧಾನ ವ್ಯವಸ್ಥಾಪಕರು (ವ&ಕಾಲೆ)/(ವಾ.ಲೆ)/(ಸಮನ್ವಯ), ಕರಾಸಕೈಅನಿನಿ, ಬೆಂಗಳೂರು
5. ಕಂಪನಿ ಕಾರ್ಯದರ್ಶಿ, ಕರಾಸಕೈಅನಿನಿ, ಬೆಂಗಳೂರು.
6. ಕಾನೂನು ಸಲಹೆಗಾರರು, ಕರಾಸಕೈಅನಿನಿ, ಬೆಂಗಳೂರು.
7. ವ್ಯವಸ್ಥಾಪಕರು (ಇಡಿಪಿ), ಕರಾಸಕೈಅನಿನಿ, ಬೆಂಗಳೂರು, ರವರಿಗೆ ಈ ಆದೇಶವನ್ನು ನಿಗಮದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.
8. ವ್ಯ.ನಿ.,ರವರ ಆಪ್ತ ಸಹಾಯಕರು, ಕರಾಸಕೈಅನಿನಿ, ಬೆಂಗಳೂರು.